

ಗ್ರೀನ್ ಬಟರ್ ಫ್ಲೈ



ಇಂಡಿಯನ್ ಸ್ಮಾಲ್ ಕುಪಿಡ್

# ಚಿಕಣಿ ಚಿಟ್ಟೆಗಳ ಗಂಧರ್ವಲೋಕ

■ ಕೇಶವ ಕುಡ್ಲ
ಚಿತ್ರಗಳು: ಕಿರಣ್ ವಟಿ ಮತ್ತು ಲೇಖಕರದ್ದು



ಕುಪಿಡ್ ರೆಕ್ಕೆ ಅರಳಿಸಿದಾಗ ಕಾಣುವ ಮೇಲ್ಭಾಗದ ನೀಲವರ್ಣ. ಬ್ಲೂಸ್ ಗುಂಪಿಗೆ ಸೇರಿದ್ದು

ಕೀಟಲೋಕದಲ್ಲಿ ಚಿಟ್ಟೆಗಳದ್ದು ಪ್ರಧಾನ ಸ್ಥಾನ. ಚಿಟ್ಟೆಗಳಲ್ಲಿ ಸ್ವಾಲ್ಲೋಟೈಲ್. ವೈಟ್ಸ್ ಅಂಡ್ ಯೆಲ್ಲೋಸ್, ಬ್ರಶ್ ಫೂಟೆಡ್, ಸ್ಕಿಪ್ಪೆರ್ಸ್ ಹಾಗೂ ಬ್ಲೂಸ್ ಎಂಬ ಪ್ರಧಾನ ವರ್ಗಗಳಿವೆ. ಇದರಲ್ಲಿ ಬ್ಲೂಸ್ ವರ್ಗದ ಚಿಟ್ಟೆಗಳನ್ನು ಬಿಟ್ಟು ಉಳಿದವು ಸಾಕಷ್ಟು ದೊಡ್ಡ ಚಿಟ್ಟೆಗಳೇ ಅಗಿವೆ.

ಬ್ಲೂಸ್ ವರ್ಗದ ಚಿಟ್ಟೆಗಳು ಅತೀ ಚಿಕ್ಕವಾಗಿರುತ್ತವೆ. ಹೆಚ್ಚುಕಡಿಮೆ ನಮ್ಮ ಕೈಬೆರಳಿನ ಉಗುರಿನಷ್ಟು ಚಿಕ್ಕವು! ಭಾರತದ ಚಿಟ್ಟೆಗಳ ಒಟ್ಟಾರೆ ವೈವಿಧ್ಯತೆ ಒಂದೂವರೆ ಸಾವಿರ ಸಂಖ್ಯೆಯನ್ನು ದಾಟಿದರೆ, ಈ ಚಿಕಣಿ ಚಿಟ್ಟೆಗಳ ಸಂಖ್ಯೆ ಸುಮಾರು 400ರಷ್ಟು ಇದೆ ಎನ್ನಲಾಗುತ್ತಿದೆ. ಚಿಕಣಿ ಚಿಟ್ಟೆಗಳ ವ್ಯಾಪ್ತಿಯಲ್ಲಿ ಹಲವಾರು ವೈವಿಧ್ಯತೆಗಳಿದ್ದರೂ ಬ್ಲೂಸ್ ಎಂಬುದು ಅತ್ಯಂತ ಜನಪ್ರಿಯ.

ಬ್ಲೂಸ್ ಎಂಬುದು ರೆಕ್ಕೆಯ ಬಣ್ಣದಿಂದಾಗಿ ಬಂದ ಹೆಸರು. ಬ್ಲೂಸ್ ವರ್ಗದ ಎಲ್ಲ ಚಿಟ್ಟೆಗಳ ರೆಕ್ಕೆ ನೀಲಿ ಬಣ್ಣದ್ದೇನೂ ಆಗಿರುವುದಿಲ್ಲ. ಅದು ವಿಶ್ರಮಿಸಲು ಕುಳಿತಾಗ ಕಾಣುವಂತೆ ಅದು ನಾನಾ ಬಣ್ಣಗಳಿಂದ ಕೂಡಿದೆ. ನಮಗೆ ಕಾಣುವ ಆ ಭಾಗ ಚಿಟ್ಟೆಗಳ ರೆಕ್ಕೆಯ ಕೆಳಭಾಗ ಮಾತ್ರ. ಆದರೆ ಕುಳಿತಾಗ ಮುಚ್ಚಿಕೊಳ್ಳುವ ರೆಕ್ಕೆಗಳ ಮೇಲ್ಭಾಗದಲ್ಲಿ ನೀಲಿ ಬಣ್ಣ ಪ್ರಧಾನವಾಗಿರುತ್ತದೆ. ಹೀಗಾಗಿ ಆ ವರ್ಗಕ್ಕೆ ಬ್ಲೂಸ್ ಎಂಬ ಹೆಸರು ಪ್ರಾಪ್ತಿಯಾಗಿದೆ.

ಬಿಸಿಲಿನಲ್ಲಿ ಕುಳಿತು ದೇಹದ ಶಾಖವನ್ನು ಹೆಚ್ಚಿಸಿಕೊಳ್ಳಲು ಅವು ರೆಕ್ಕೆಯನ್ನು ಬಿಡಿಸುತ್ತವೆ. ಆ ಸಮಯದಲ್ಲಿ ಅಲ್ಲಿ ನೀಲಿ ಬಣ್ಣದ ಛಾಯೆಯನ್ನು ಕಾಣಬಹುದು. ರೆಕ್ಕೆಗಳ ಮೇಲ್ಭಾಗದಲ್ಲಿ ಕೆಲವಂಶ ನೀಲಿ ಮಚ್ಚೆಗಳು ಕಾಣಬಹುದು. ರೆಕ್ಕೆಯ ಅರ್ಧಭಾಗ ನೀಲಿ ಬಣ್ಣವನ್ನು ಹೊಂದಿರಬಹುದು ಅಥವಾ ಕೆಲವೊಮ್ಮೆ ಸಂಪೂರ್ಣ ನೀಲ ವರ್ಣವೂ ಇರಬಹುದು. ಇದರ ಜೊತೆಗೆ ಇತರ ವರ್ಗದಲ್ಲೂ ಚಿಕಣಿ ಚಿಟ್ಟೆಗಳು ಇರಬಾರದೆಂದೇನೂ ಇಲ್ಲ. ಈ ವರ್ಗದ ಸಣ್ಣ ಚಿಟ್ಟೆಗಳ ಮತ್ತೊಂದು ವಿಶೇಷವೆಂದರೆ, ಹಿಂದಿನ ರೆಕ್ಕೆಗಳ ಅಡಿಭಾಗದಲ್ಲಿ ಸಣ್ಣ ದಾರದಂತಹ ಬಾಲವಿರುತ್ತದೆ. ಕುಪಿಡ್‌ನಂತಹ ಕೆಲವು ವರ್ಗದಲ್ಲಿ ಈ ಬಾಲವು ಸಣ್ಣ ದಾರದಂತಿದ್ದರೆ, ಸಿಲ್ವರ್ ಲೈನ್, ಕಾಮನ್ ಇಂಪೀರಿಯಲ್, ನೀಲಗಿರಿ ಟಿಟ್‌ನಂತಹ ಬ್ಲೂಸ್ ಚಿಟ್ಟೆಗಳಲ್ಲಿ ಸಾಕಷ್ಟು ಉದ್ದವಾಗಿಯೇ ಇರುತ್ತದೆ.

ಕೀಟತಜ್ಞರು ಇವುಗಳನ್ನು ವರ್ಗೀಕರಿಸಲು ಬಣ್ಣ, ಬಾಲ, ಆಕಾರಗಳ ಆಧಾರದಲ್ಲಿ ಹಲವು ಹೆಸರಿಟ್ಟಿದ್ದಾರೆ. ಕಂದು ವರ್ಣದ ಕಾಮನ್ ಡಾರ್ಕ್, ಗ್ರೇಟ್ ಡಾರ್ಕ್ ಬುಷ್ ಬ್ರೌನ್, ಕಾಮನ್ ಬ್ರೌನ್, ಬಿಳಿ ರೆಕ್ಕೆಯ ಮೇಲೆ

(8ನೇ ಪುಟ ನೋಡಿ)